ದಿನಕ್ಕೆ ಹದಿನೈದು ಲಕ್ಷ ಉರುಳಿಹೋಯ್ತು. ಆದರೂ ಇವರು ಉಳಿದರಲ್ಲ ಅನ್ನೋ ಸಮಾಧಾನ. ರಿಟೈರ್ಡ್ ಟೀಚರ್. ಇನ್ಸೂರೆನ್ಸ್ ಕೂಡಾ ಇಲ್ಲ. ಆರ್‌ಆರ್ ನಗರದಲ್ಲೊಂದು ಥರ್ಟಿ ಫಾರ್ಟಿ ಸೈಟಿದೆ. ಅದೊಂದು ಧೈರ್ಯ. ನಾನು ಇಷ್ಟೆಲ್ಲಾ ಏಕೆ ಮಾತಾಡ್ತಿದ್ದೀನಿ ಅಂದ್ರೆ ನಿಮ್ಮನ್ನು ವಾರದಿಂದಲೂ ಈ ಲಾಂಜ್ನಲ್ಲಿ ನೋಡ್ತ ಇದ್ದೀನಿ. ಬೈದಿಬೈ ನೀವು ಸೋ ಅಂಡ್ ಸೋ ಕಥೆಗಾರ ಅಲ್ವಾ...' ಎಂದಿದ್ದರು. ಅರೆ, ಬಾಪ್ರೆ ಎಂಥಾ ಐಡೆಂಟಿಟಿ! ಅದೂ ಆಸ್ಪತ್ರೆಯಲ್ಲಿ! 'ಹೌದು ಮೇಡಮ್ ನಾನೇ ಅವನು. ನಿಜ ಹೇಳಿದರೆ ನೀವು ಬೆರಗಾಗುತ್ತೀರಿ. ನಾನು ಬೆಸ್ಟ್ ಲವ್ ಸ್ಟೋರಿಸ್ ಬರೆದಿದ್ದು ಇವಳನ್ನು ಪ್ರೀತಿಸಲು ಶುರುಮಾಡಿದ ನಂತರವೇ. ಮತ್ತೂ ಹೇಳಬೇಕೆಂದರೆ ಇವಳಿಗಾಗಿಯೇ ನಾನು ಕಥೆಗಳನ್ನು ಬರೆಯಲು ಪ್ರಾರಂಭಿಸಿದ್ದು. ನಂತರ ನೋಡಿ, ಇವಳೇ ನನ್ನ ಕಥೆಗಳ ವ್ಯಾಕರಣವಾದಳು, ಮೆಟಫರ್ ಆದಳು, ಸಿಮಿಲಿ ಆದಳು...' ಅಷ್ಟರಲ್ಲಿ ಪಕ್ಕದ ಎಮರ್ಜೆನ್ಸಿ ವಾರ್ಡಿನಿಂದ ಇಡೀ ಆಸ್ಪತ್ರೆಯ ಬಿಲ್ಡಿಂಗ್ ಹಾರಿಹೋಗುವಂತೆ ಹೆಣ್ಣೊಬ್ಬಳು ಚೀರುತ್ತಿರುವುದು ಕೇಳಿ ಬಂದು ಆಕೆ ಧಡಕ್ಕನೆ ಎದ್ದು ಆ ಕಡೆ ಓಡಿದ್ದರು. ಏನೋ ಅನಾಹುತ ಗತಿಸಿದೆಯೆಂದುಕೊಂಡು ಸುಮ್ಮನೆ ಕುಳಿತಿದ್ದೆ. ದಿನಕ್ಕೆ ಮೂರ್ನಾಲ್ಕು ಶವಗಳಾದರೂ ಆಸ್ಪತ್ರೆಯಿಂದ ವ್ಯಾನುಗಳಲ್ಲಿ ಹೊರಹೋಗುತ್ತಿದ್ದುದ್ದನ್ನು ಕಂಡಿದ್ದರಿಂದ ಸಾವಿನ ಬಗ್ಗೆ ಒಂಥರಾ ತಿರಸ್ಕಾರವೇ ಮೂಡಿತ್ತು ನನ್ನಲ್ಲಿ. ರೋಗಿಗಳನ್ನು ಕರೆತರುವಾಗ ಜೋರಾಗಿ ಸೈರನ್ನಿನೊಂದಿಗೆ ಜೀವಂತಿಕೆಯಿಂದ ಆಸ್ಪತ್ರೆ ಪ್ರವೇಶಿಸುತ್ತಿದ್ದ ಅಂಬ್ಯುಲೆನ್ಸ್‌ಗಳು ಹೆಣಗಳನ್ನು ಹೊತ್ತು ಹೊರಡುವಾಗ ಸೈರನ್ ಇಲ್ಲದೆ ನೀರಸವಾಗಿ ಮೌನದಿಂದ ತೆರಳುತ್ತಿದ್ದವು. ಹತ್ತು ನಿಮಿಷದಲ್ಲಿ ಆಕೆ ಹಿಂತಿರುಗಿ ಬಂದು ನಾನು ಏನೆಂದು ಕೇಳದಿದ್ದರೂ 'ಅಡ್ಮಿಟ್ ಆಗಿ ಜಸ್ಟ್ ಫಿಫ್ಟೀನ್ ಮಿನಿಟ್ಸ್ ಆಗಿತ್ತಂತೆ. ಆತನಿಗೂ ಜಸ್ಟ್ ಫಾರ್ಟಿ ಇಯರ್ಸ್ ಅಂತೆ. ಮ್ಯಾಸಿವ್ ಹಾರ್ಟ್ ಅಟ್ಯಾಕ್ ಆಗಿ ಹೋಗ್ಬಿಟ್ನಂತೆ. ಆತನ ಹೆಂಡತಿ ಚೀರಿಕೊಂಡಿದ್ದು' ಎನ್ನುತ್ತಾ ಮತ್ತೆ ತಮ್ಮ ಸೀಟಿನಲ್ಲಿ ಕುಳಿತಿದ್ದರು. ನನ್ನ ಬಾಯಿಂದ 'ಅಷ್ಟೆ' ಎಂಬ ಪದವೊಂದು ಹೊರಬಿದ್ದಿತ್ತು.

ಎಂಟನೆಯ ಮಹಡಿಯ ಕೆಫೆಟೇರಿಯದಲ್ಲಿ ಬಿಸಿಬಿಸಿ ಕಾಫಿ ಕುಡಿದು ಸರಿಯಾಗಿ ನಾಲ್ಕು ಗಂಟೆಗೆ ಐಸಿಯು ಪ್ರವೇಶಿಸಿದಾಗ ಪಿಳಿಪಿಳಿ ಕಣ್ಣು ಬಿಡುತ್ತಾ ಮುಕ್ಕಾಲು ಭಾಗ ಮಡಿಚಿದ್ದ ಮಂಚದ ಹಾಸಿಗೆಗೆ ಒರಗಿದ್ದವಳು ಮಧ್ಯಾಹ್ನ ನೋಡಿದ್ದಕ್ಕಿಂತಲೂ ಚಿಂತೆಗೆ ಬಿದ್ದವಳಂತೆ ಕಂಡಿದ್ದಳು. ಮುಖದ ಬಳಿ ಬಗ್ಗಿ 'ಈಗ ಹೇಗಿದೆ' ಎಂದು ಕೇಳಿದ್ದೆ. ಇವಳು ಸ್ವಲ್ಪವೇ ನಕ್ಕು 'ಓಡಿಹೋಗೋಣವ ಇಲ್ಲಿಂದ ದೂರ ದೂರ...' ನುಡಿದಿದ್ದಳು ಮೆಲ್ಲನೆ. ಓ ಮೈ ಗಾಡ್! ಮುವತ್ತು ವರ್ಷಗಳ ಹಿಂದೆಯೂ ಅವಳು ಇದೇ ಮಾತುಗಳನ್ನಾಡಿದಾಗ ಅವಳಿಗಿನ್ನೂ ಜಸ್ಟ್ ಟ್ವೆಂಟಿ ಇಯರ್ಸ್. ಇವಳ ಮಾತುಗಳನ್ನು ಕೇಳಿ ರೋಮಾಂಚಿತನಾಗಿದ್ದೆ. ಎಷ್ಟೊಂದು ಸಡಗರ ಎಷ್ಟೊಂದು ಸಂಭ್ರಮ. ಪ್ರೀತಿಗೆ ಅಂಥದ್ದೊಂದು ಶಕ್ತಿಯನ್ನು, ಧೈರ್ಯವನ್ನು ತುಂಬಿದ್ದಾದರೂ ಯಾರು. ನಾನು ಮುಂದೆ ಇವಳು ಹಿಂದೆ. ಇವಳು ಮುಂದೆ ನಾನು ಹಿಂದೆ. ಹಿಂದಕ್ಕಿತ್ತು ಚಿಂತೆ ಕಷ್ಟಗಳ ಸಂತೆ. ಕಡಲ ತೀರದ ಮರಳ ಮೇಲೆ ಒಬ್ಬರ ಹೆಸರಲ್ಲೊಬ್ಬರ ಹೆಸರು ಬರೆದದ್ದೇನು. ಸ್ಟ್ರಾ ಇಲ್ಲದೆ ಸಿಯಾಳ ಕುಡಿದಿದ್ದೇನು. ಕಡಲ ದಂಡೆಯ ಮೇಲೆ ದುಂಡು ಮಲ್ಲಿಗೆಯ ದಿಂಡು ಕೊಡಿಸಿದಾಗ 'ಪ್ರೀತಿಯಲ್ಲಿ ಬರಿ ಮಧುರ ಭಾವವೊಂದಿದ್ದರೇ ಸಾಲದು ಕಣೋ, ಉಸಿರು ಕಟ್ಟಿಸುವಂತ ದಟ್ಟವಾದ ಘಾಟೂ ಇರಬೇಕು' ಎಂದು ಕೆಂಡಸಂಪಿಗೆಯ ದಿಂಡನ್ನೂ ಕೊಂಡು ಮುಡಿದು ಕಣ್ಣಂಚಿನಲ್ಲಿ ನಗೆ ಕುಣಿಸಿದ್ದೇನು. ಇಬ್ಬರೂ ಓಡಿ ಓಡಿ ಕಡೆಗೆ ನಿಂತಿದ್ದು ಮೆಜೆಸ್ಟಿಕ್‌ನ ಅಣ್ಣಮ್ಮನ ಗುಡಿಯ ಮುಂದೆ. ಬಾಗಿಲು ಮುಚ್ಚಿದ ಅಣ್ಣಮ್ಮನ ಗುಡಿಯ ಮುಂದೆ ಇವಳ ಕೊರಳಿಗೆ ತಾಳಿ ಕಟ್ಟಿದಾಗ ರಾತ್ರಿ ಹತ್ತು ಗಂಟೆಯಾಗಿತ್ತು. ಮುತ್ತೈದೆಯಾಗಿ ಸಾಕ್ಷಿಯಾದದ್ದು ಟ್ಯಾಂಕ್ ಬಂಡ್ ರಸ್ತೆಯ ನ್ಯಾಶನಲ್ ಟ್ರಾವೆಲ್ಸ್ ಮುಂದೆ ಫುಟ್ಪಾತ್ ಮೇಲೆ ವಡೆ, ಬಜ್ಜಿ, ಬೋಂಡ ಮಾರುತ್ತಿದ್ದ ಮಹದೇವಮ್ಮ. ನಮ್ಮನ್ನು ನೋಡಿ ಮೆಜೆಸ್ಟಿಕ್‌ನ ನಿಯಾನ್ ದೀಪಗಳು ಕಿಲ ಕಿಲ ನಕ್ಕು ಕಣ್ಣು ಹೊಡೆದಿದ್ದವು. ಫುಟ್ಪಾತ್ ಮೇಲೆ ನಡೆಯುವವರು ಕ್ಷಣ ನಿಂತು ನೋಡಿ ಮುಂದೆ ಹೋಗುತ್ತಿದ್ದರು. ಎರಡು ದಿನ ಮೆಜೆಸ್ಟಿಕ್‌ನ ರಸ್ತೆಗಳಲ್ಲಿ ಎಂಥಾ ಮಜ ಮಂಡಿಯೂರಿತ್ತು. ಕೆಂಪೇಗೌಡ ರಸ್ತೆಯ ಮೈಸೂರು ಬ್ಯಾಂಕ್ ಬಿಲ್ಡಿಂಗ್ ಮೇಲೆ ಎಷ್ಟೊಂದು ಕಾಮನಬಿಲ್ಲುಗಳು ಕಮಾನು ಕಟ್ಟಿದ್ದವು. ಈ ಮೆಜೆಸ್ಟಿಕ್‌ನ ರಸ್ತೆಗಳಿಗೆ ಭೇದ ಭಾವವೆಂಬುದೇ ಇಲ್ಲ.

